ಪಿಡಬ್ಲ್ಯೂ -1

**ಸಾಕ್ಷಿಯನ್ನು ದಿಃ05.02.2020 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಲ್ ಎನ್ ಅರ್ ವಕೀಲರಿಂದಃ**

ನಿಪಿ 9 ಮೃತ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದೆರ ಸರಿ. ನಿಪಿ 1 ಅದ ದಿನಾಂಕದ ನಂತರ ದಾವಾ ಸರ್ವೆ ನಂ. 292/3 ಸ್ವತ್ತಿಗೆ ಸಂಬಂದಿಸಿದಂತೆ ನನ್ನ ಹೆಸರಿನಲ್ಲಾಗಲೀ ಅಥವಾ ನನ್ನ ತಂದೆಯ ಹೆಸರಿನಲ್ಲಾಗಲೀ ಪಹಣಿ ಮತ್ತು ಖಾತೆ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿದರೆ ಅದು ಪಹಣಿಯಲ್ಲಿ ನಮೂದನೆ ಅಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷಡ್ಯೂಲ್ ಸ್ವತ್ತು ಯಾವ ಕಾಲಕ್ಕೂ ಅನ್ಯಕ್ರಾಂತ ಅಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 13 ದಾವಾ ಷಡ್ಯೂಲ್ ಸ್ವತ್ತಿನ ಅನ್ಯಕ್ರಾಂತ ಅದೇಶದ ದೃಡೀಕೃತ ಪ್ರತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 13 ರಲ್ಲಿ ದಾವಾ ಸರ್ವೆ ನಂಬರ್ 292/3 ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ 13 ರಲ್ಲಿ 152/4 ನಮೂದಾಗಿರುತ್ತದೆ ಎಂದರೆ ಸರಿ. ಸರ್ವೆ ನ. 292/3 ಮತ್ತು 152/4 ನಮಗೆ ಸಂಬಂಸಿರುವುದಿಲ್ಲ ಎಂದರೆ ಸರಿಯಲ್ಲ . ಅದು ಕ್ಷೆಚ್ಚಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನ. 292/3 ಮತ್ತು 152/4 ನಿಪಿ 1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

1996-97 ರಲ್ಲಿ 1 ನೇ ಪ್ರತಿವಾದಿ ನನ್ನ ತಂದೆ ವಿರುದ್ದ ಅರ್ ಅರ್ ಟಿ ನಂ 4/1996-97 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕಣದನ್ವಯ ದಾವಾ ಸರ್ವೆ ನಂ 292/3 ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 05.02.1994 ರಲ್ಲಿ ನಾನು ಮತ್ತು ನನ್ನ ತಂದೆ ಹಾಗೂ ನನ್ನ ಸಹೋದರ ಮೃತ 1 ನೇ ಪ್ರತಿವಾದಿಗೆ ಸರ್ವೆ ನಂಬರ್ 292/3 ಮತ್ತು ಇತರ ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲು ನಮ್ಮದು ಯಾವುದೇ ತಕರಾರು ಇಲ್ಲ ಎಂದು ದಾಖಲೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಓ ಎಸ್ 59/1998

ರ ದಾವೆಯಲ್ಲಿ ಪ್ರತಿವಾದಿ ಹಾಜರುಪಡಿಸಿದ್ದರು ಎಂದರೆ ಸರಿ. ಸದರಿ ದಾಖಲಾತಿ ಅದಾರದ



ಮೇಲೆ ನಾವು ಸಲ್ಲಿಸಿದ ಓಎಸ್ 59/1998 ವಜಾ ಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅದರ ಮೇಲೆ ಅಫೀಲು ಸಲ್ಲಿಸಿರುತ್ತೇವೆಂದು ನುಡಿಯುತ್ತಾರೆ. ಸದರಿ ದಾವೆ ವಜಾಗೊಂಡ ನಂತರ ಮೃತ 1 ನೇ ಪ್ರತಿವಾದಿ ಮಕಕಳು ಸದರಿ ಸ್ವತ್ತಿನ ಖಾತೆಯನ್ನು ಮಾಡಲು ಅರ್ಜಿ ಸಲ್ಲಿಸಿದಾಗ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ತಕರಾರನನ್ನು ವಜಾಗೊಳಿಸಿ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಕರಾಲು ಸಲ್ಲಿಸಿದ ನಂತರ ನೀವು ನ್ಯಾಯಾಲಯಕ್ಕೆ ಹೋಗಿದ್ದೀರ ಎಂದರೆ ಸಾಕ್ಷಿಯು ನನಗೆ ಯಾವುದೇ ನೋಟಿಸ್ಸು ಬರದ ಕಾರಣ ನಾನು ನ್ಯಾಯಾಲಯಕ್ಕೆ ಹೋಗಿರುವುದಿಲ್ಲವೆಂದು ನುಡಿಯುತ್ತಾರೆ. ನಾನು ಸದರಿ ತಕರಾಲುನ್ನು 4 ನೇ ಪ್ರತಿವಾದಿಯ ಅರ್ಜಿ ಸಲ್ಲಿಸುವ ಮುನ್ನವೇ ಸಲ್ಲಿಸಿದ್ದೇ. ನಾನು ತಕರಾಲು ಸಲ್ಲಿಸಿದ ಬಗ್ಗೆ ಯಾುವುದೇ ದಾಖಲಾತಿಯನ್ನು ನ್ಯಾಯಲಾಯಕ್ಕೆ ಹಾರುಪಡಿಸಿಲ್ಲ. 4 ನೇ ಪ್ರತಿವಾದಿ ಆರ್ಜಿ ಸಲ್ಲಿಸಿದ ನಂತರ ನ್ಯಾಯಲಾಯದಿಂದ ನನಗೆ ನೋಟಿಸ್ಸು ಬಂದಿದ್ದು , ನಾನು ಅದಕ್ಕೆ ತಕರಾರಲುನ್ನು ಸಲ್ಲಿಸಿದ ನಂತರ ನನ್ನ ತಕರಾಲನ್ನು ವಜಾ ಮಾಡಿ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಷಡ್ಯೂಲ್ ಸ್ವತ್ತು ಮೃತ 1 ನೇ ಪ್ರತಿವಾದಿಯ ಜೀಮಿತ ಕಾಲದಲ್ಲಿ ಅವರ ಹೆಸರಿನಲ್ಲಿ ಇದ್ದು , ಆ ನಂತರ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆಯಾುಗಿ ಇಂದಿಗೂ ಅವರ ಹಸೆರಿಗೆ ಪಹಣಿ ಪತ್ರಿಕೆ ಬರುತ್ತದೆ ಎಂದರೆ ಸಾಕ್ಷಿಯು ನಮಗೆ 2008 ರಲ್ಲಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಾನು ನಿಪಿ 9 ನ್ನು ದಿಃ 18-05-2007 ರಲ್ಲಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ 4 ನೇ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬಂದ ಬಗ್ಗೆ ನಾನು ಉಪ ವಿಭಾಗದೀಕಾರಿ ನ್ಯಾಯಾಲಯದಲ್ಲಿ ಅಫೀಲು ಸಲ್ಲಿಸಿರುತ್ತೆನೆ ಅದರೆ ಅದರ ದಾಖಾಲತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಯಾವುದೇ ಅಫೀಲು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯೊಳಗೆ ಸ್ವತ್ತು ಇದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಈಗ ಸಾಕ್ಷಿಗೆ ಒಂದು ಹಿಂಬರವನ್ನು ತೋರಿಸಲಾಗಿ ಅದು ಚಿಕ್ಕ ಅಂಕಂಡಹಳ್ಳಿ ಗ್ರಾಮ ಪಂಚಾಯಿತಿ

ಯವರು ನೀಡಿದ್ದು ಎಂದು ಒಪ್ಪಿಕೊಂಡ ಮೇರೆಗ ಅದನ್ನು ನಿಡಿ 1 ಎಂದು



ಗುರುತಿಸಲಾಯಿಯಿತು. ಈಗ ಸಾಕ್ಷಿಗೆ ಒಂದು ಹಿಂಬರವನ್ನು ತೋರಿಸಲಾಗಿ ಅದು ಚಿಕ್ಕ ಅಂಕಂಡಹಳ್ಳಿ ಗ್ರಾಮ ಪಂಚಾಯಿತಿ ಯವರು ನೀಡಿದ್ದು ಎಂದು ಒಪ್ಪಿಕೊಂಡ ಮೇರೆಗ ಅದನ್ನು ನಿಡಿ 2 ಎಂದು ಗುರುತಿಸಲಾಯಿಯಿತು. ಈಗ ಸಾಕ್ಷಿಗೆ ಒಂದು ಹಿಂಬರವನ್ನು ತೋರಿಸಲಾಗಿ ಸಾಕ್ಷಿ ಅದಲ್ಲಿರುವ ಒಕ್ಕಣೆಗಳನ್ನು ನಿರಾಕರಿಸಿದ್ದು , ಅದನ್ನು ಚಿಕ್ಕ ಅಂಕಂಡಹಳ್ಳಿ ಗ್ರಾಮ ಪಂಚಾಯಿತಿ ಯವರು ನೀಡಿದ್ದಾರೆ ಎಂದು ಒಪ್ಪಿಕೊಂಡ ಮೇರಗೆ ಸದರಿ ದಾಖಲಾತಿಯ ಒಕ್ಕಣೆಗಳನ್ನು ರುಜುವಾತುಪಡಿಸುವ ಹೊಣೆಗಾರಿಕಗೆ ಮೇರೆಗ ನಿಡಿ 3 ಎಂದು ಗುರುತಿಸಲಾಯಿತು.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದುಃ ವಕೀಲರ **ಕೋರಿಕೆ ಮೇರೆಗೆ**</u>

**<u>ಮುಂದೂಡಲಾಯಿತು</u>.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

(ದೀಪು ಬಿ.ಸಿ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ.